# ಕರ್ನಾಟಕ ಕೃಷಿ ಬೆಲೆ ಆಯೋಗ – ಬೆಂಗಳೂರು

# "ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸದೃಡ ಮಾರುಕಟ್ಟೆ"

## – ಕೇಂದ್ರದ ನೂತನ ಯೋಜನೆಗಳ ಸಮಗ್ರ ವಿಶ್ಲೇಷಣೆ ಕುರಿತು ರಾಷ್ಟ್ರಮಟ್ಟದ ತಾಂತ್ರಿಕ ಕಾರ್ಯಾಗಾರದ ಪ್ರಮುಖ ಚರ್ಚಾ ವಿಚಾರಗಳು ಮತ್ತು ಅಭಿಪ್ರಾಯಗಳು

*ದಿನಾಂಕ:* 26.07.2018 ಒಂದು ಟಿಪ್ಪಣಿ *ಸ್ಥಳ:* ಬೆಂಗಳೂರು

ರೈತರಿಗೆ ತಮ್ಮ ಉತ್ಪನ್ನಗಳ ಉತ್ಪಾದಕತೆ ಹೆಚ್ಚಿಸುವುದರ ಜೊತೆಗೆ **ಲಾಭದಾಯಕ ಬೆಲೆ** ಹಾಗೂ **ಸುವ್ಯವಸ್ಥಿತ ಮಾರುಕಟ್ಟೆ** ವ್ಯವಸ್ಥೆ ಕಲ್ಪಿಸಿಕೊಡುವುದು ಕೂಡ ಅತ್ಯವಶ್ಯಕವಾಗಿರುತ್ತದೆ. ಸರ್ಕಾರದ ಸಮಯೋಚಿತ ಮಧ್ಯಪ್ರವೇಶದಿಂದ ರೈತರ ಉತ್ಪನ್ನಗಳ ಬೆಲೆ ಕುಸಿತವನ್ನು ತಪ್ಪಿಸಿ, ಮಾರುಕಟ್ಟೆಯಲ್ಲಿ ಸ್ಥಿರತೆ ಸಾಧಿಸಬಹುದು.

ಕೇಂದ್ರ ಸರ್ಕಾರ 2018-19ನೇ ಸಾಲಿನಲ್ಲಿ **'ಕನಿಷ್ಠ ಬೆಂಬಲ ಬೆಲೆ'** (Minimum Support Price) ಯನ್ನು 25 ಕೃಷಿ ಬೆಳೆಗಳಿಗೆ ಘೋಷಿಸಿದ್ದು, ಈ ***"ಕನಿಷ್ಠ ಬೆಂಬಲ ಬೆಲೆ ಉತ್ಪಾದನಾ ವೆಚ್ಚದ ಮೇಲೆ ಶೇ.50 ರಷ್ಟು ಲಾಭದೊರಕಿಸುವಷ್ಟು ಸಮರ್ಥವಾಗಿರುತ್ತದೆ"*** ಎನ್ನಲಾಗಿರುತ್ತದೆ.

**ಜೊತೆಗೆ, ಆಯಾ ರಾಜ್ಯಗಳು ಖರೀದಿಸಿ, ಬೆಲೆ ಸ್ಥಿರೀಕರಣ ಕಾರ್ಯವನ್ನು ಸಮರ್ಥವಾಗಿ ಕೈಗೊಳ್ಳಲು "ಮಾರುಕಟ್ಟೆ ಖಾತರಿ ಯೋಜನೆ" (Market Assurance Scheme - MAS), ಖರೀದಿ ಬದಲಿಗೆ "ಬೆಲೆ ವ್ಯತ್ಯಾಸ / ಕೊರತೆ ಪಾವತಿ ಯೋಜನೆ" (Price Deficiency Payment Scheme - PDPS), ಇವೆರಡಕ್ಕೆ ಪೂರಕವಾಗಿ "ಖಾಸಗಿ ವರ್ತಕರು ಖರೀದಿಸಿ, ಶೇಖರಿಸಿಡಲು ಪ್ರೋತ್ಸಾಹಿಸುವ ಯೋಜನೆ" (Private Procurement and Stocking Scheme) ಈ ಮೂರು ಹೊಸ ಯೋಜನೆಗಳನ್ನು ಕೇಂದ್ರ ಸರ್ಕಾರ ರೂಪಿಸಿರುತ್ತದೆ.**

ಇದಕ್ಕೆ ಹೊಂದಿಕೊಂಡಂತೆ **ಮಾದರಿ ಎ.ಪಿ.ಎಂ.ಸಿ** ಹಾಗು **ಒಪ್ಪಂದ ಕೃಷಿ** (Contract Farming) ಕಾಯಿದೆಗಳ ಬಗ್ಗೆನೂ ಪ್ರಸ್ತಾಪಿಸಲಾಗಿರುತ್ತದೆ. ಈ ಎಲ್ಲಾ ಯೋಜನೆಗಳನ್ನು ಸಮರ್ಥವಾಗಿ ಬಳಸಿಕೊಂಡು ರಾಜ್ಯ ಸರ್ಕಾರ ಸಕಾಲದಲ್ಲಿ ಖರೀದಿ ಮುಂತಾದ **ಮಾರುಕಟ್ಟೆ ಮಧ್ಯಪ್ರವೇಶ** (Market Interventions) ಕಾರ್ಯಕ್ರಮಗಳ ಮೂಲಕ ಬೆಲೆ ಸ್ಥಿರತೆ ಸಾಧಿಸಬೇಕಾಗಿದೆ. ಹಾಗೆ, ಈ ರೀತಿಯ ಖರೀದಿಯಿಂದ ಸರ್ಕಾರಕ್ಕೆ ಹೊರೆಯಾಗದಂತೆ, ನಂತರ ಈ ಉತ್ಪನ್ನಗಳನ್ನು ಬಳಸುವ ಮತ್ತು ವಿತರಿಸುವ ಕ್ರಮದ ಬಗ್ಗೆ ಕೂಡ ಯೋಚಿಸಬೇಕಾಗಿದೆ.

**2016-17 ನೇ ಸಾಲಿನಲ್ಲಿ ರಾಜ್ಯದ ರೈತರು ಬೆಳೆದ ಪ್ರಮುಖ ಬೆಳೆಗಳ ಒಟ್ಟು ಉತ್ಪಾದನೆಯಲ್ಲಿ ಶೇ.36ರ ಪ್ರಮಾಣ ಮಾತ್ರ ಎ.ಪಿ.ಎಂ.ಸಿ ಪ್ರಾಂಗಣದೊಳಗೆ ನಿಯಂತ್ರಿತ ಮಾರುಕಟ್ಟೆ ಪರಧಿಯಲ್ಲಿ ಬಂದು ಮಾರಾಟವಾಗಿರುತ್ತದೆ. ಬಂದಂತಹ ಉತ್ಪನ್ನಗಳಲ್ಲಿ ಸರಾಸರಿ ಶೇ.62 ರಷ್ಟು ಪ್ರಮಾಣ ಮಾತ್ರ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಗಿಂತ ಅಧಿಕ ಮಟ್ಟದಲ್ಲಿ ಮಾರಾಟವಾಗಿರುತ್ತದೆ. ಇದು ನಮ್ಮ ಮಾರಾಟ ವ್ಯವಸ್ಥೆಯ ಒಂದು ದೊಡ್ಡ ಲೋಪವಾಗಿರುತ್ತದೆ.**

ಈ ದಿಶೆಯಲ್ಲಿ **ಕರ್ನಾಟಕ ಕೃಷಿ ಬೆಲೆ ಆಯೋಗ** ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಆಗುವ ಪೂರಕ ಬದಲಾವಣೆಗಳನ್ನು ಅವಲೋಕಿಸಲು ದಿನಾಂಕ: 26.07.2018 ರಂದು ಬೆಂಗಳೂರಿನಲ್ಲಿ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ಏರ್ಪಡಿಸಿರುತ್ತದೆ. ಮೇಲಿನ ಎಲ್ಲಾ ಯೋಜನೆಗಳನ್ನು ಸವಿವರವಾಗಿ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳಾದ **ಡಾ. ಅಶೋಕ್ ದಳವಾಯಿ** ರವರು ಉದ್ಘಾಟನಾ ಭಾಷಣದಲ್ಲಿ ಸಭೆಗೆ ವಿವರಿಸಿದರು. *ಈ ಕಾರ್ಯಾಗಾರದಲ್ಲಿ ಚರ್ಚಿಸಿರುವ ಪ್ರಮುಖ ವಿಚಾರ ಹಾಗು ಅಭಿಪ್ರಾಯಗಳನ್ನು ಮುಂದೆ ನೀಡಲಾಗಿದೆ.*

## I. ಸಕಾಲದಲ್ಲಿ ಖರೀದಿ ಮತ್ತು ಶೀಘ್ರ ಪಾವತಿ

ಈಗಿರುವ ಖರೀದಿ ಯೋಜನೆ ಬದಲಿಗೆ ರಾಜ್ಯ ಸರ್ಕಾರಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವ **ಮಾರುಕಟ್ಟೆ ಖಾತರಿ ಯೋಜನೆ** (Market Assurance Scheme) ಮುಂದಿನ ಸಾಲಿನಿಂದ ಜಾರಿಗೆ ಬರಲಿದ್ದು ಅದರ ಯಶಸ್ವಿ ಅನುಷ್ಠಾನದ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲಿರುತ್ತದೆ.

- **2017-18ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಸುಮಾರು 51 ಲಕ್ಷ ಕ್ವಿಂಟಾಲ್‌ಗಳಷ್ಟು ಪ್ರಮುಖ ದ್ವಿದಳ ಧಾನ್ಯಗಳು ಹಾಗೂ ಶೇಂಗಾ ಖರೀದಿಯನ್ನು ಕೈಗೊಂಡಿದ್ದರೂ, ಈ ಖರೀದಿ ಪ್ರಾರಂಭಿಸುವ ಹೊತ್ತಿಗೆ ಈ ಉತ್ಪನ್ನಗಳಲ್ಲಿ ಶೇ.42 ರಷ್ಟು ಪ್ರಮಾಣದ ಆವಕ ಮಾರುಕಟ್ಟೆಗೆ ಬಂದು ವಿಕ್ರಯವಾಗಿರುತ್ತದೆ.**

- ಈ ರೀತಿ ಸಕಾಲದಲ್ಲಿ, ಮುಂಚಿತವಾಗಿ ಸರ್ಕಾರ ಖರೀದಿ ಪ್ರಾರಂಭಿಸದಿದ್ದಲ್ಲಿ, ಮಾರುಕಟ್ಟೆಯಲ್ಲಿ ಆಗಲೇ ನಡೆದಿರುವ ವಿಕ್ರಯ ಮತ್ತು ತಿರುಗಿ ಸರ್ಕಾರ ಕೈಗೊಳ್ಳುವ ಖರೀದಿಗೆ ಬರುವ ಸಾಧ್ಯತೆಯಿರುತ್ತದೆ !
- **ಧಾರಣೆ ವರ್ತನೆ ಮುನ್ಸೂಚನೆ** (Price Forecasting) ಯನ್ನು ಗಮನಿಸಿ ಸಕಾಲದಲ್ಲಿ ಸರ್ಕಾರ ಖರೀದಿ ಕೈಗೊಳ್ಳಲು ಅನುವು ಮಾಡಿಕೊಡುವ ಉದ್ದೇಶದಿಂದ ಕೃಷಿ ಬೆಲೆ ಆಯೋಗ **'ಕೃಪ'** (ಕೃಷಿ ಉತ್ಪನ್ನ ಧಾರಣೆ ವಿಶ್ಲೇಷಣ ಫಲಕ) ಎಂಬ **'ಡ್ಯಾಶ್‌ಬೋರ್ಡ್'** (Dash Board) ಸಿದ್ದಪಡಿಸಿದ್ದು, ಕಾರ್ಯಾಗಾರದಂದು **ಮಾನ್ಯ ಸಹಕಾರ ಸಚಿವ**ರಿಂದ ಲೋಕಾರ್ಪಣೆಯಾಗಿರುತ್ತದೆ. ಇದರ ಸಮರ್ಪಕ ಉಪಯೋಗವನ್ನು ಕರ್ನಾಟಕ ಸರ್ಕಾರ ಪಡೆದುಕೊಳ್ಳಬೇಕು.

- **ಸರ್ಕಾರ ಖರೀದಿಸಿದ ಉತ್ಪನ್ನದ ಮೌಲ್ಯವನ್ನು ರೈತರಿಗೆ ಪಾವತಿಸಲು ವಿಳಂಬವಾದಲ್ಲಿ, ನಂತರ ಬಾಕಿ ಹಣಕ್ಕೆ ಬಡ್ಡಿ ಸಮೇತ ಸೇರಿಸಿ ಪಾವತಿಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು.**

- ಸರ್ಕಾರ **ಗುಣಮಟ್ಟದ** (FAQ) ಉತ್ಪನ್ನಗಳನ್ನು ಮಾತ್ರ ಖರೀದಿಸುವಂತೆ ಕಟ್ಟುನಿಟ್ಟಿನ ಕ್ರಮತಂದು ಈ ನಿಟ್ಟಿನಲ್ಲಿ ರೈತಾಪಿ ವರ್ಗಕ್ಕೆ ಸೂಕ್ತ ತಿಳುವಳಿಕೆ, ತರಬೇತಿ ನೀಡಬೇಕು.

## II. ಖರೀದಿಸಿದ ಉತ್ಪನ್ನಗಳ ಸೂಕ್ತ ಬಳಕೆ

- ಖರೀದಿಸಿದ ಉತ್ಪನ್ನಗಳನ್ನು ಪಡಿತರ, ಶಾಲಾ ಮಕ್ಕಳಿಗೆ ಮಧ್ಯಾಹ್ನದೂಟ, ಸರ್ಕಾರದ ವಿದ್ಯಾರ್ಥಿನಿಲಯ ಇತ್ಯಾದಿ **ಆಹಾರ ಭದ್ರತೆ** ಕಾರ್ಯಕ್ರಮಕ್ಕೆ ಪೂರಕವಾದ ಯೋಜನೆಗಳಿಗೆ ಸರ್ಕಾರವೇ ಬಳಸುವಂತಾಗಬೇಕು.
- ಮೇಲಿನ ಉದ್ದೇಶಕ್ಕೆ ಅಗತ್ಯಬಾರದ ಉತ್ಪನ್ನಗಳನ್ನು ಸಂಸ್ಕರಣೆ, ರಫ್ತಿಗೆ ನೇರ ಸರಬರಾಜು, ಇತರೆ ರಾಜ್ಯಗಳಿಗೆ ರವಾನೆ ಇತ್ಯಾದಿ ಕ್ರಮಗಳ ಮೂಲಕ **ಖರೀದಿದಾರ ಸಂಸ್ಥೆಗಳು** ನಷ್ಟ ಅನುಭವಿಸದಂತೆ ಎಚ್ಚರವಹಿಸಬೇಕು.

- **ಖರೀದಿಸಿದ ಉತ್ಪನ್ನವನ್ನು ಸ್ಥಳೀಯವಾಗಿ ಹರಾಜು ಹಾಕುವುದಾಗಲೀ ಅಥವಾ ಧಾರಣೆ, ಬೆಂಬಲ ಬೆಲೆಗಿಂತ ಕೆಳಗೆ ಇಳಿಮುಖ ಪ್ರವೃತ್ತಿ ಹಿಡಿದಿರುವಾಗ ಮತ್ತೆ ಮಾರುಕಟ್ಟೆಗೆ ಬಿಡುಗಡೆ ಮಾಡುವುದನ್ನು ಕಡ್ಡಾಯವಾಗಿ ನಿರ್ಬಂಧಿಸಬೇಕು.**

## III. ಬೆಲೆ ವ್ಯತ್ಯಾಸ ಪಾವತಿ ಯೋಜನೆಯ ಅನುಷ್ಠಾನ

- ಸರ್ಕಾರ ನೇರವಾಗಿ ಖರೀದಿಸುವ ಬದಲಿಗೆ ಕೃಷಿ ಉತ್ಪನ್ನಗಳ ಧಾರಣೆ ಕುಸಿದಾಗ ಬೆಂಬಲ ಬೆಲೆ ಮತ್ತು ಮಾರುಕಟ್ಟೆ ಧಾರಣೆಗಳ ವ್ಯತ್ಯಾಸವನ್ನು ರೈತರ ಖಾತೆಗೆ ನೇರವಾಗಿ ವರ್ಗಾಹಿಸುವ ನೂತನ **ಬೆಲೆ ವ್ಯತ್ಯಾಸ/ಕೊರತೆ ಪಾವತಿ ಯೋಜನೆ** (Price Deficiency Payment Scheme - PDPS) ಯನ್ನು ಕೇಂದ್ರ ಸರ್ಕಾರ ಪ್ರಸ್ತಾಪಿಸಿರುತ್ತದೆ.

- **ಈ ಯೋಜನೆಯನ್ನು ಮಧ್ಯಪ್ರದೇಶ ಸರ್ಕಾರ ಕಳೆದ ಸಾಲಿನಲ್ಲಿ ಎಣ್ಣೆಕಾಳು, ದವಸ ಧಾನ್ಯಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದ್ದು, ಈ ಮೂಲಕ ನೇರ ಖರೀದಿಗೆ ಹೋಲಿಸಿದಲ್ಲಿ ಶೇ.80 ರಷ್ಟು ಉಳಿತಾಯವಾಗಿರುವುದಾಗಿ ಸಭೆಗೆ ಆಹ್ವಾನಿತರಾಗಿದ್ದ ಮಧ್ಯಪ್ರದೇಶ ಸರ್ಕಾರ ಕೃಷಿ ಮಂಡಿ ಬೋರ್ಡ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಫಯಾಜ್ ಅಹಮದ್ ಕಿದ್ವಾಯ್ ರವರು ತಿಳಿಸಿದರು.**

- ಮಧ್ಯಪ್ರದೇಶದ ಈ ಯೋಜನೆ ಅನುಷ್ಠಾನದಿಂದ ಕೃಷಿ ಉತ್ಪನ್ನಗಳ ಮಾರುಕಟ್ಟೆ ಆವಕ ಪ್ರಮಾಣ ಗಮನಾರ್ಹವಾಗಿ (ಶೇ.154 ರಷ್ಟು) ಏರಿದ್ದು, ನಿಯಂತ್ರಿತ ಮಾರುಕಟ್ಟೆ ವ್ಯಾಪ್ತಿಯಲ್ಲೆ ಮಾರಾಟ ಮಾಡಲು ನಮ್ಮ ರೈತರಿಗೂ ಪ್ರೋತ್ಸಾಹ ದೊರಕಲಿದೆ.
- ಬೆಲೆ ವ್ಯತ್ಯಾಸ ಪರಿಹಾರ ಯೋಜನೆಯ ಉಪಯೋಗ ಪಡೆಯಲು ರೈತರು ಮುಂಚಿತವಾಗಿ ನೊಂದಣಿ ಮಾಡಿಕೊಳ್ಳುವುದು ಅಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಇ-ಮಾರುಕಟ್ಟೆ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ **ReMs ಸಂಸ್ಥೆಯ** ಸಹಕಾರ ಪಡೆಯುವುದು ಸೂಕ್ತವಾಗಿರುತ್ತದೆ.

## IV. ತೋಟಗಾರಿಕೆ ಬೆಳೆಗಳಲ್ಲಿ ಶೀಘ್ರ ಬೆಲೆ ವ್ಯತ್ಯಾಸ ಪಾವತಿ ಯೋಜನೆ

- ಈ ಬೆಲೆ ವ್ಯತ್ಯಾಸ ಪಾವತಿ ಯೋಜನೆಯನ್ನು ಪ್ರಾಯೋಗಿಕವಾಗಿ ಟೊಮೊಟೊ, ಈರುಳ್ಳಿ, ಆಲೂಗೆಡ್ಡೆ ಮತ್ತು ಹೂಕೋಸು, ಈ ನಾಲ್ಕು ಬೆಳೆಗಳಿಗೆ ಹರಿಯಾಣ ರಾಜ್ಯದಲ್ಲಿ ಪ್ರಾಯೋಗಿಕವಾಗಿ ಕಳೆದ ಸಾಲಿನಲ್ಲಿ ಅನುಷ್ಠಾನಗೊಳಿಸಿದ್ದು, ವಿವರವನ್ನು ಸಭೆಯಲ್ಲಿ ಭಾಗವಹಿಸಿದ್ದ ಹರಿಯಾಣ ರಾಜ್ಯದ ತೋಟಗಾರಿಕಾ ಮಹಾ ನಿರ್ದೇಶಕರಾದ ಡಾ.ಅರ್ಜುನ್ ಸಿಂಗ್ ಸೈನಿ, ವಿವರಿಸಿದರು.
- ಈ ಪದ್ದತಿಯ ಬಗ್ಗೆ ಸಭೆಯಲ್ಲಿ ವಿಶ್ವಾಸ ಏರ್ಪಾಟಾಗಿದ್ದು ರಾಜ್ಯದಲ್ಲೂ ತೋಟಗಾರಿಕ ಬೆಳೆಗಳಿಗೆ ಅನ್ವಯಿಸುವುದು ಸೂಕ್ತ ಎಂದು ನಿರ್ಧರಿಸಿ ಈ ಸಾಲಿನಲ್ಲಿ ಟೊಮೊಟೊ ಮತ್ತು ಈರುಳ್ಳಿ ಬೆಳೆಗಳಿಗೆ ಪ್ರಾಯೋಗಿಕ ಅನುಷ್ಠಾನಗೊಳಿಸುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬರಲಾಯಿತು.

- **ಈ ಬೆಳೆ ವ್ಯತ್ಯಾಸ ಪರಿಹಾರ ಯೋಜನೆಯ ಮೂಲಕ ರೈತರಿಗೆ ಪರಿಹಾರ ಒದಗಿಸಲು ಡಾ.ಸ್ವಾಮಿನಾಥನ್ ಶಿಫಾರಸ್ಸಿನಂತೆ ಸಮಗ್ರ ವೆಚ್ಚ (Cost $C_2$) ದ ಮೇಲೆ ಶೇ.50 ರಷ್ಟು ಲಾಭಾಂಶದ ಬೆಂಬಲ ಬೆಲೆಯನ್ನು ಪರಿಗಣಿಸಬೇಕೆಂದು ರೈತ ಪ್ರತಿನಿಧಿಗಳು ಆಗ್ರಹಿಸಿದರು.**

- ಇದಕ್ಕೆ ಪೂರಕವಾಗಿ ಕೃಷಿ ಬೆಳೆಗಳಂತೆ ತೋಟಗಾರಿಕಾ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆಯನ್ನು ಪ್ರತಿ ಸಾಲಿನಲ್ಲೂ ಘೋಷಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ನಿರ್ಧರಿಸಲಾಯಿತು.

## V. ಒಪ್ಪಂದ ಕೃಷಿ ಪದ್ದತಿ ಜಾರಿಗೊಳಿಸುವುದು

- ಕೇಂದ್ರದ ಈ ನೂತನ ಯೋಜನೆಗಳ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರ ಈಗಾಗಲೇ ಸಿದ್ದಪಡಿಸಿರುವ ಮಾದರಿ **ಒಪ್ಪಂದ ಕೃಷಿ [Agricultural Produce and Livestock Farming and Services (*Promotion and Facilitation*) Act – 2018] ಕಾಯಿದೆ** ಯನ್ನು ಅನುಷ್ಠಾನಗೊಳಿಸಬೇಕಾಗಿದೆ.
- ಸಣ್ಣ ರೈತರ ಉತ್ಪನ್ನಗಳನ್ನೆಲ್ಲಾ ಒಗ್ಗೂಡಿಸಿ, ಬೆಲೆ ಖಾತರಿಗೊಳಿಸಿ, ಖರೀದಿದಾರರು, ಸಂಸ್ಕರಣಾಕಾರರು, ರಫ್ತುದಾರರೊಡನೆ ನೇರ ಸಂಬಂಧ ಏರ್ಪಡಿಸುವ ನಿಟ್ಟಿನಲ್ಲಿ ಈ ಒಪ್ಪಂದ ಕೃಷಿ ಸೂಕ್ತವಾಗಿದ್ದರೂ, **ರೈತಾಪಿವರ್ಗದ ಹಿತ ಕಾಪಾಡಲು** ಇದರಲ್ಲಿ ಒತ್ತು ನೀಡುವುದು ಅಗತ್ಯ ಎಂಬ ಅಭಿಪ್ರಾಯ ಮೂಡಿತು.

- **ರೈತರನ್ನು ಏಕಾಂಗಿಯಾಗಿ ಒಪ್ಪಂದದೊಳಗೆ ತರುವ ಬದಲಾಗಿ ಕಡ್ಡಾಯವಾಗಿ ರೈತ ಉತ್ಪಾದಕ ಸಂಘ / ಕಂಪನಿ (Farmer Producers Organization / Company) ಗಳಂತಹ ಗುಂಪು ಕೃಷಿ ವ್ಯವಸ್ಥೆ ಏರ್ಪಡಿಸಿ ಅವುಗಳೊಡನೆ ಗುತ್ತಿಗೆ ಸಂಸ್ಥೆ / ಕಂಪನಿಗಳೊಡನೆ ಒಪ್ಪಂದ ಏರ್ಪಡಿಸಬೇಕು.**

- ಈ ಒಪ್ಪಂದ ಕೃಷಿ ಮೂಲಕ ಅನುಷ್ಠಾನಗೊಳಿಸುವ ತಂತ್ರಜ್ಞಾನ, ಬೆಳೆ ಪದ್ದತಿಗಳಿಂದಾಗಿ ಮಣ್ಣಿನ ಫಲವತ್ತತೆ, ಭೂಮಿಯ **ದೀರ್ಘಾವಧಿ ಸುಸ್ಥಿರತೆ** (Sustainability) ಹಾಳಾಗದಂತೆ ವಿಶೇಷ ನಿಗಾವಹಿಸಬೇಕು.
- ಒಪ್ಪಂದದಲ್ಲಿ ನಿರ್ಧರಿಸಿರುವ **ಪೂರ್ವಭಾವಿ ಧಾರಣೆ** ಕಟಾವಿನ ನಂತರ ರೈತರಿಗೆ ತೃಪ್ತಿಯಾಗದಿದ್ದಲ್ಲಿ ಈ ಬಗ್ಗೆ **ಪುನರ್ ಸಂಧಾನ** (Renegotiation) ಬಗ್ಗೆ ಅವಕಾಶ ಕಲ್ಪಿಸಿ, ರೈತರಿಗೆ ನ್ಯಾಯಯುತ ಬೆಲೆ ಸಿಗುವಂತೆ ಮಾಡಬೇಕು.

## VI. ಶೇಖರಣೆ ಮತ್ತು ಅಡಮಾನ್ ಸಾಲವ್ಯವಸ್ಥೆ ಸದೃಡಗೊಳಿಸುವುದು

- ರೈತರು ಬೆಳೆದ ಉತ್ಪನ್ನವನ್ನು ಕೆಲ ಕಾಲ ಕೂಡಿಟ್ಟು ನಂತರ ಧಾರಣೆ ಉತ್ತಮವಾಗಿರುವಾಗ ಮಾರಾಟ ಮಾಡುವಂತಾಗಬೇಕು. ಇದಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರ ಮತ್ತು ಖಾಸಗಿ ಹಾಗೇ ರೈತರ ಫಾರಂಗಳಲ್ಲಿ ಉತ್ಪನ್ನಗಳನ್ನು ಶೇಖರಿಸುವ ಗೋಡೌನ್‌ಗಳ ನಿರ್ಮಾಣಕ್ಕೆ ಸರ್ಕಾರ ಪ್ರಥಮ ಆದ್ಯತೆ ನೀಡಬೇಕು.

- **ಈ ರೀತಿ ಶೇಖರಿಸಿಡುವ ಉತ್ಪನ್ನದ ಮೇಲೆ ರಿಯಾಯ್ತಿ ಬಡ್ಡಿದರದಲ್ಲಿ ಎ.ಪಿ.ಎಂ.ಸಿ, ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲ ನೀಡುವ 'ಅಡಮಾನ್ ಸಾಲ' (Pledge Loan) ವ್ಯವಸ್ಥೆ ಜಾರಿಯಲ್ಲಿದ್ದರೂ ಬೆರಳಣಿಕೆಯ ರೈತರು ಮಾತ್ರ ಇದರ ಉಪಯೋಗ ಪಡೆಯುತ್ತಿರುವರು. ಅಡಮಾನ್ ಸಾಲ ವ್ಯವಸ್ಥೆಯ ಈ ವೈಫಲ್ಯದ ಬಗ್ಗೆ ಸಮಗ್ರ ಅಧ್ಯಯನ ನಡೆದು ಇದನ್ನು ಸದೃಡಗೊಳಿಸುವ ಬಗ್ಗೆ ಸೂಕ್ತ ಕ್ರಮವಹಿಸಬೇಕು.**

## VII. ಜಿಲ್ಲಾವಾರು ಬೆಳೆ ಯೋಜನೆ ಮತ್ತು ಉತ್ಪಾದನೆ ಮುನ್ನಂದಾಜು

- ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಎನ್ನುವುದು ಅಂತಿಮವಾಗಿ ಮಾರುಕಟ್ಟೆಯಲ್ಲಿ ತೀರ್ಮಾನವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಬೇಡಿಕೆ (Demand) ಹಾಗೂ ಪೂರೈಕೆ (Supply) ಗಳಿಗೆ ಅನುಗುಣವಾಗಿ ಉತ್ಪನ್ನಗಳ ಬೆಲೆ ಸ್ಥಿರತೆ ಕಾಪಾಡಲು ಅವಶ್ಯಕತೆಗೆ ಅನುಗುಣವಾಗಿ ಉತ್ಪಾದನೆಯನ್ನು ಮಾಡಲು ರೈತರ ಸಹಮತ ಪಡೆದು ಜಿಲ್ಲಾವಾರು **"ಬೆಳೆ ಯೋಜನೆ"** ರೂಪಿಸುವುದು ಅತ್ಯಂತ ಸೂಕ್ತವಾಗಿರುತ್ತದೆ.

- **ವಿವಿಧ ಬೆಳೆಗಳ ಉತ್ಪಾದನ ಪ್ರಮಾಣವನ್ನು ಮುನ್ನಂದಾಜು ಮಾಡುವುದು ಅಗತ್ಯವಾಗಿದ್ದು, ಇದಕ್ಕೆ ಪೂರಕವಾಗಿ ಪ್ರತಿ ಸಾಲಿನಲ್ಲಿ ವಿವಿಧ ಬೆಳೆಗಳ ಬಿತ್ತನೆ ಕೈಗೊಂಡ ಭೂ ವಿಸ್ತೀರ್ಣವನ್ನು ನಿಖರವಾಗಿ ತಿಳಿಯಬೇಕಾಗಿದೆ.**

- ಈ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರದ ರೀತಿಯಲ್ಲಿ ಕೃಷಿ, ತೋಟಗಾರಿಕ **ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳನ್ನು** ತೊಡಗಿಸಿಕೊಂಡು ಸರ್ಕಾರ ಈಗಾಗಲೇ ಸಿದ್ದಪಡಿಸಿರುವ 'ಭೂಮಿ' ಇತರೆ ತತ್ರಾಂಶ ಸಾಧನೆಗಳ ಮೂಲಕ ಬಿತ್ತನೆಯಾದ ವಿವಿಧ ಬೆಳೆಗಳ ನಿಖರವಾದ ವಿಸ್ತೀರ್ಣದ ಅಂಕಿ ಅಂಶಗಳು ಶೀಘ್ರ ಸಿಗುವ ವ್ಯವಸ್ಥೆ ಏರ್ಪಾಟಾಗಬೇಕು.

## VIII. ಕಾನೂನಿನ ಮೂಲಕ ಬೆಂಬಲ ಬೆಲೆ ಖಾತರಿಗೊಳಿಸುವುದು.

- ಎಲ್ಲಕ್ಕಿಂತ ಮುಖ್ಯವಾಗಿ, ರೈತರ ಉತ್ಪನ್ನಗಳ ಧಾರಣೆಯನ್ನು ಕಾನೂನಿನ ವ್ಯಾಪ್ತಿಗೆ ತಂದು ಬೆಂಬಲ ಬೆಲೆ ಖಾತರಿಗೊಳಿಸಬೇಕೆನ್ನುವುದು ರೈತಾಪಿ ವರ್ಗದ ಆಗ್ರಹವಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಎ.ಪಿ.ಎಂ.ಸಿ ವ್ಯಾಪ್ತಿಯ ದಳ್ಳಾಳಿಗಳ (ಅಡತಿ) ಮಂಡಿಗಳಲ್ಲಿ ಕೇಂದ್ರ ಸರ್ಕಾರ ಘೋಷಿಸಿದ ಬೆಂಬಲ ಬೆಲೆಗಿಂತ ಕಡಿಮೆ ಮಟ್ಟದಲ್ಲಿ ಖರೀದಿ ನಡೆಯದಂತೆ ಕಾನೂನು ರಚಿಸುವುದು ಅತ್ಯಗತ್ಯವಾಗಿರುತ್ತದೆ.

- ಈ ವಿಚಾರದಲ್ಲಿ ನೆರೆಯ **ಮಹಾರಾಷ್ಟ್ರ ಸರ್ಕಾರ** 1967ರಲ್ಲಿ ಎ.ಪಿ.ಎಂ.ಸಿ ಕಾಯಿದೆಗೆ ಮಾರ್ಪಾಟು ತಂದಿದ್ದು, ಆಯಾ ಮಾರುಕಟ್ಟೆ ಸಮಿತಿಗಳಿಗೆ ಬೆಂಬಲ ಬೆಲೆಗಿಂತ ಕೆಳಮಟ್ಟದಲ್ಲಿ ಖರೀದಿ ತಡೆಗಟ್ಟುವ ಜವಾಬ್ದಾರಿ ಮತ್ತು ಅಧಿಕಾರಗಳೆರಡನ್ನೂ ನೀಡಿರುತ್ತದೆ.

- **ಇದಕ್ಕೆ ಪೂರಕವಾಗಿ ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲೂ ಬೆಂಬಲ ಬೆಲೆ ಖಾತರಿಗೆ 'ಅಗತ್ಯ ಸರಕು ಕಾಯಿದೆ' (Essential Commodity Act - 1955) ಗೂ ತಿದ್ದು ಪಡಿತರುವಂತೆ ಕೇಂದ್ರ ಸರ್ಕಾರದ ಮೇಲೆ ಸೂಕ್ತ ರೀತಿಯಲ್ಲಿ ಒತ್ತಡ ತರಬೇಕಾಗಿದೆ.**

ಸರ್ಕಾರದ ವಿವಿಧ ಇಲಾಖೆಗಳ ಸಹಯೋಗದಲ್ಲಿ ಈ ಎಲ್ಲಾ ಯೋಜನೆಗಳ ಸಾಧಕ ಬಾಧಕಗಳನ್ನು ವಿಶ್ಲೇಷಿಸಿ ಸರ್ಕಾರಕ್ಕೆ ತಗುಲುವ ಹಣಕಾಸಿನ ಹೊರೆ ಇತ್ಯಾದಿಗಳನ್ನು ಲೆಕ್ಕ ಹಾಕಿ ಇವುಗಳನ್ನು ಕಾರ್ಯರೂಪಕ್ಕೆ ತಂದು ರಾಜ್ಯದ ರೈತಾಪಿ ವರ್ಗದ ಹಿತಕಾಯಲು ಕೃಷಿ ಬೆಲೆ ಆಯೋಗ ಶಕ್ತಿಮೀರಿ ಪ್ರಯತ್ನಿಸುವ ಆಶ್ವಾಸನೆ ನೀಡಲಾಯಿತು.